## 10

### ಮೂಲ ವಾಕ್ಯ: 1 ಕೊರಿಂಥ 5:7, 8

# ಅದರಲ್ಲಿ ಪಾಲುಗೊಳ್ಳಲು ಯಾರು ಯೋಗ್ಯರು?

ಲೂಕನ ಪ್ರಕಾರವಾಗಿ, ಶಿಷ್ಯರು ರೊಟ್ಟಿ ಮುರಿಯುವದಕ್ಕಾಗಿ ಸೇರಿ ಬಂದರು (ಅಪೊಸ್ತಲರ ಕೃತ್ಯಗಳು 20:7; KJV). ಈ ಶಿಷ್ಯರು ಯಾರಾಗಿದ್ದರು? ಅವರು ಆತನ ಅನುಯಾಯಿಗಳಾದ ಕ್ರೈಸ್ತರು ಆಗಿದ್ದರು (ಅಪೊಸ್ತಲರ ಕೃತ್ಯಗಳು 11:26). ಕರ್ತನ ಭೋಜನ ಹಾಗೂ ಪಾನ ಪಾತ್ರೆಯಲ್ಲಿ ಇತರರು ಪಾಲುಗಾರರಾಗಬಹುದೇ?

*ಡಿಡಾಚ್ಛೆಯ* ಪ್ರಕಾರ, ದೀಕ್ಷಾಸ್ನಾನ ಹೊಂದಿಕೊಂಡು, ನಂಬಿಗಸ್ತರಾಗಿದ್ದವರು ಮಾತ್ರ. ಕರ್ತನ ಸಭೆಯ ಭೋಜನದಲ್ಲಿ ಪಾಲುಗಾರರಾಗುತ್ತಿದ್ದರು ಎಂದು ಚರಿತ್ರೆಯು ತಿಳಿಸುತ್ತದೆ:

> ಕರ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದವರು ಮಾತ್ರ ಈ ಪರಿಶುದ್ಧ ಸಂಸ್ಕಾರದಲ್ಲಿ ಪಾಲುದಾರರಾಗಲಿ ಈ ವಿಚಾರದ ಕುರಿತು ಕರ್ತನು "ಪರಿಶುದ್ಧವಾದದ್ದನ್ನು ನಾಯಿಗಳಿಗೆ ಹಾಕಬೇಡಿರಿ" ಎಂದು ಹೇಳಿದ್ದಾನೆ.[1]

> ಕರ್ತನು ನೇಮಿಸಿದ ದಿನದಲ್ಲಿ ನೀವುಗಳು ಒಟ್ಟಾಗಿ ಸೇರಿ ಬಂದು ಸ್ತೋತ್ರ ಮಾಡಿ ರೊಟ್ಟಿ ಮುರಿಯಿರಿ, ಮೊದಲ ಪಾಪಗಳನ್ನು ಅರಿಕೆ ಮಾಡಿ ಆಗ ನಿಮ್ಮ ಯಜ್ಞವು ನಿರ್ಮಲವಾಗಿರುತ್ತದೆ. ನಿಮ್ಮಲ್ಲಿ ಗೊಂದಲಗೊಂಡವನು ಮೊದಲು ಅದನ್ನು ಸರಿಪಡಿಸಿಕೊಂಡು ನಿರ್ಮಲವಾದ ಯಜ್ಞವನ್ನು ಸಮರ್ಪಿಸಲಿ, ಕರ್ತನು ಇದನ್ನೇ ಮಾತನಾಡಿರುವನು.[2]

ತೆರ್ತುಲಿಯನ್ನನು ಬರೆದು ಕ್ರೈಸ್ತರು ಅನ್ಯರೊಂದಿಗೆ ಸೇರಿ ಕರ್ತನ ಭೋಜನವನ್ನು ಮಾಡಬಾರದು ಎಂಬ ವಿಚಾರದಲ್ಲಿ:

> ಅವರು ನಿಮ್ಮ ಹಾಗೆ ವರ್ತಿಸುವರು, ನಿಮ್ಮ ಹಾಗೆ ಕೇಳುವರು. ನಿಮ್ಮ ಹಾಗೆ ಪ್ರಾರ್ಥಿಸುವರು. ಅನ್ಯರು ಈ ರೀತಿ ಮಾಡುವದರಿಂದ "ಪರಿಶುದ್ಧವಾದದ್ದನ್ನು ನಾಯಿಗಳಿಗೂ, ಮುತ್ತುಗಳನ್ನು ಹಂದಿಗಳ ಮುಂದೆಯೂ" ಹಾಕುವ ಪರಿಸ್ಥಿತಿಯು ಇದಾಗಿರುತ್ತದೆ.[3]

ಕರ್ತನ "ಭೋಜನವೆಂಬ" ಮುತ್ತನ್ನು ಅನ್ಯರಿಗೆ ನೀಡಬಾರದು.

ಒಂದು ಕ್ರೈಸ್ತ ಗುಂಪಿನವರು 144,000 ಸಾವಿರ ಜನರು ಮಾತ್ರ ಕರ್ತನ ಭೋಜನದಲ್ಲಿ ಪಾಲುಗಾರರಾಗಬೇಕು ಎಂದು ಸಮರ್ಥನೆ ಮಾಡುತ್ತಾರೆ:

> ಒಡಂಬಡಿಕೆಯ ರಾಜ್ಯಕ್ಕೆ ದೇವರು ಯಾರನ್ನು ಕರೆಯುತ್ತಾನೋ ಅವರು ಮಾತ್ರ ಭೋಜನದಲ್ಲಿ ಪಾಲುಗಾರರಾಗಬೇಕು.
>
> ಎಷ್ಟು ಜನ ಪಾಲುಗಾರರಾಗಬೇಕು? "ಚಿಕ್ಕ ಹಿಂಡು" ಮಾತ್ರ ಪರಲೋಕ ರಾಜ್ಯದ ಬಹುಮಾನ ಹೊಂದಲು ಸಾಧ್ಯ ಎಂದು ಯೇಸು ಹೇಳಿರುವನು (ಲೂಕ 12:32). ಅವರ ಸಂಖ್ಯೆ 144,000 (ಪ್ರಕಟನೆ 14:1-3). ಅದನ್ನು ಲೆಕ್ಕಿಸುವದಾದರೆ, ಕರ್ತನ ಭೋಜನ ದಲ್ಲಿ ಪಾಲುಗಾರರಾಗುವವರು ಕೇವಲ ಕೆಲವೇ ಜನರು.[4]

ಕರ್ತನ ಕೃಪೆಯನ್ನು ಹೊಂದದವರಿಗೆ ಕರ್ತನ ಭೋಜನವನ್ನು ನೀಡಬಾರದು ಎಂದು ಕೆಲವು ಸಭೆಗಳವರು ಬೋಧಿಸುತ್ತಾರೆ. ಅಂಥವರು ಈ ಭೋಜನದಲ್ಲಿ ಪಾಲುದಾರರಾದರೆ, ತಮ್ಮನ್ನು ತಾವೇ ತೀರ್ಪಿಗೆ ಒಳಪಡಿಸಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಮಾರ್ಟಿನ್ ಲೂಥರ್‌ರವರು ಭೋದಿಸಿ: "ದೇವರ ಪ್ರಸನ್ನತೆ ಇರುವ ದೇಹದಲ್ಲಿ ಪಾಲುಗಾರನಾಗುವ ದುಷ್ಟನು ತನ್ನನ್ನು ನಾಶಪಡಿಸಿಕೊಳ್ಳುತ್ತಾನೆ."[5]

ಕರ್ತನ ಭೋಜನದಲ್ಲಿ ಪಾಲುಗಾರರಾಗುವ ಯೋಗ್ಯರು ಯಾರು ಎಂಬುದಕ್ಕೆ ವಾಕ್ಯದ ಅನೇಕ ಆಧಾರಗಳಿವೆ: ಅಪೊಸ್ತಲರ ಕೃತ್ಯಗಳು 2:41, 42; 20:7; 1 ಕೊರಿಂಥ 5:1-11; ಮತ್ತು 10:16, 17 ಇವುಗಳನ್ನು ಜಾಗ್ರತೆಯಿಂದ ಪರಿಶೀಲನೆ ಮಾಡೋಣ.

## ದೀಕ್ಷಾಸ್ನಾನ ಹೊಂದಿದವರು (ಅಪೊಸ್ತಲರ ಕೃತ್ಯಗಳು 2:41, 42)

> ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು. ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು (ಅಪೊಸ್ತಲರ ಕೃತ್ಯಗಳು 2:41, 42).

ಈ ವಾಕ್ಯದ ಪ್ರಕಾರವಾಗಿ, ದೀಕ್ಷಾಸ್ನಾನ ಹೊಂದಿದವರು, ರೊಟ್ಟಿ ಮುರಿಯುವದರಲ್ಲಿ ಮುಂದವರೆದರು. ಇವರು ಪೇತ್ರನ ಸುವಾರ್ತೆಯನ್ನು ಕೇಳಿ ರಕ್ಷಿಸಲ್ಪಟ್ಟ ಮೂರು ಸಾವಿರ ಜನರಾಗಿದ್ದರು, ಅವರು ದೀಕ್ಷಾಸ್ನಾನ ಹೊಂದಿದ್ದರು, ಅವರು ಪಂಚಾಶತ್ತಮ ದಿನದಂದು ಸಭೆಗೆ ಸೇರಿದವರು. ಅದರೊಂದಿಗೆ ಪ್ರಾರ್ಥನೆ, ವಾಕ್ಯಬೋಧನೆ, ಹಾಗೂ ಅನ್ಯೋನ್ಯತೆಗೆ ಆದ್ಯತೆ ನೀಡಿದ್ದರು.

## ಕ್ರೈಸ್ತರು (ಅಪೊಸ್ತಲರ ಕೃತ್ಯಗಳು 20:7)

> ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡಿಸಿದನು (ಅಪೊಸ್ತಲರ ಕೃತ್ಯಗಳು 20:7).

ಕ್ರೈಸ್ತರಾದ ಶಿಷ್ಯರು ರೊಟ್ಟಿ ಮುರಿಯಲು ಸೇರಿದರು (ನೋಡಿರಿ ಅಪೊಸ್ತಲರ ಕೃತ್ಯಗಳು 11:26) ಎಂದು ಲೂಕನು ಬರೆದಿರುವನು. ಅಪೊಸ್ತಲರ ಉಪದೇಶಕ್ಕೆ ಒಳಗಾದ ಕ್ರೈಸ್ತರು ಮಾತ್ರ ಕರ್ತನ ಭೋಜನದಲ್ಲಿ ಸೇರಿ ಬಂದರು ಎಂಬುದು ಸ್ಪಷ್ಟ ವಾಗಿದೆ.

## ಕ್ರೈಸ್ತ ಜೀವಿತವನ್ನು ಜೀವಿಸುತ್ತಿರುವವರು (1 ಕೊರಿಂಥ 5:1-11)

ಕೆಟ್ಟತನದಲ್ಲಿ ಜೀವಿಸುತ್ತಿರುವ ಕ್ರೈಸ್ತರು ಕರ್ತನ ಭೋಜನದಲ್ಲಿ ಪಾಲುದಾರರಾಗಬಾರದು. ತನ್ನ ತಂದೆಯ ಪತ್ನಿಯೊಂದಿಗೆ ಅನೈತಿಕವಾಗಿ ಜೀವಿಸುವವನು ಇದರಲ್ಲಿ ಪಾಲುದಾರರಾಗಬಾರದೆಂದು ಪೌಲನು ಬರೆದಿರುವನು, ಅವನನ್ನು ಸೈತಾನನಿಗೆ ಒಪ್ಪಿಸಿರಿ (1 ಕೊರಿಂಥ 5:1-8). ಕ್ರೈಸ್ತರು ಅವನೊಂದಿಗೆ ಇಜ್ಜೋಡಾಗಬಾರದು (1 ಕೊರಿಂಥ 5:11).

ಈ ಹೇಳಿಕೆಯ ಕುರಿತು ವರ್ನರ್ ಎಲೆರ್ಟ್‌ರವರು ಬರೆದು,

ಇದು ಕರ್ತನ ಭೋಜನದ ಕುರಿತಾದ ವಾಕ್ಯಭಾಗವಾಗಿದ್ದರೂ, ಒಂದು ವೇಳೆ, ಕರ್ತನ ಭೋಜನ ಕುರಿತಾಗಿಲ್ಲದಿದ್ದರೂ, ಅದು ಯೋಗ್ಯವಾದ ವಿಚಾರವೇ ಆಗಿರುತ್ತದೆ.[6]

ನಂತರದಲ್ಲಿ ಅವರು ಬರೆದು,

ಪೌಲನ ಈ ಹೇಳಿಕೆಯನ್ನು ಅಕ್ಷರಶ ಪರಿಗಣಿಸುವದು ಕಷ್ಟಕರವೇ, ಅದು ಕೊರಿಂಥದ ವ್ಯಭಿಚಾರಿಗಳ ಕುರಿತಾಗಿರುವದರಿಂದ, ಕೊರಿಂಥದವರು ಮಾತ್ರ ಅಂಥವನಿಗೆ ಅನ್ಯೋನ್ಯತೆ ನೀಡಬಾರದಿತ್ತು. ಪೌಲನು ಅಂಥವನನ್ನು ಸೈತಾನನಿಗೆ ಒಪ್ಪಿಸಿಬಿಟ್ಟನು (1 ಕೊರಿಂಥ 5:4). ಆದಿ ಕ್ರೈಸ್ತರಿಗೆ ಸೈತಾನನ ರಾಜ್ಯವು ಕ್ರಿಸ್ತನ ರಾಜ್ಯಕ್ಕಿಂತ, ಸ್ಥಳೀಯ ವಾಗಿತ್ತಷ್ಟೆ.[7]

ಈ ಅನೈತಿಕ ಮನುಷ್ಯನ ಕುರಿತು ಪೌಲನು ನಿಖರವಾದ ಸೂಚನೆಗಳನ್ನು ನೀಡಿರುವನು:

ನೀವು ಹುಳಿಯಿಲ್ಲದವರೆನಿಸಿಕೊಂಡದ್ದರಿಂದ ಹಳೆ ಹುಳಿಯನ್ನು ತೆಗೆದುಹಾಕಿ ಹೊಸ ಕಣಿಕದಂತಾಗಿರ್ರಿ. ಯಾಕಂದರೆ ನಮ್ಮ ಪಸ್ಕದ ಯಜ್ಞದ ಕುರಿಯು ಕೊಯ್ಯಿದದೆ; ಅದಾವದಂದರೆ ಕ್ರಿಸ್ತನೇ. ಆದಕಾರಣ ನಾವು ಹಳೇ ಹುಳಿಯನ್ನು ಅಂದರೆ ದುರ್ಮಾರ್ಗತ್ವ ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೆ ಸರಳತೆ ಸತ್ಯತೆ ಎಂಬ ಹುಳಿಯಿಲ್ಲದ ರೊಟ್ಟಿಯನ್ನೇ ತೆಗೆದುಕೊಂಡು ಹಬ್ಬವನ್ನು ಆಚರಿಸೋಣ (1 ಕೊರಿಂಥ 5:7, 8).

ಈ ಪಾಪಿಯಾದ ಮನುಷ್ಯನು "ಹುಳಿ ಹಿಟ್ಟಿಗೆ ಸಂಬಂಧಪಟ್ಟಿದ್ದನು" ನಂಬಿಗಸ್ತರಾದ ಕ್ರೈಸ್ತರು ಅವನೊಂದಿಗೆ ಇಚ್ಛೋಡಾಗಬಾರದಿತ್ತು.ಯಾಕಂದರೆ ಅವನು ಪಾಪ ಸ್ವಭಾವದವನಾದ್ದರಿಂದ, ಸಭೆಯನ್ನೇ ಅಶುದ್ಧಮಾಡುವ ಸಾಧ್ಯತೆಯಿತ್ತು. ಹುಳಿ ಹಿಟ್ಟಿನಂತಿರುವ ಆ ಅನೈತಿಕ ಮನುಷ್ಯನನ್ನು ಪ್ರತ್ಯೇಕ ಮಾಡುವದರಿಂದ ಕ್ರೈಸ್ತ ಸಮುದಾಯವು ನಿರ್ಮಲವಾಗಿರುವ ಸಾಧ್ಯತೆಯಿತ್ತು. ಈ ವಿಧವಾಗಿ ಅವರು ಕರ್ತನ ಭೋಜನದಲ್ಲಿ ಪಾಲುದಾರರಾಗಬಹುದಿತ್ತು ಏಕೆಂದರೆ ಆ ಕೆಟ್ಟವನ ಪರಿಣಾಮವು ಅವರ ಮೇಲೆ ಬೀಳಿರಲಿಲ್ಲ.

ಗೋರ್ಡನ್ D. ಫೀಯವರ ಪ್ರಕಾರ,

1 ಕೊರಿಂಥ 5:8 ರಂತೆ, ಅವರು ಕರ್ತನ ಮೇಜಿನ ಮುಂದೆ ಕೂತುಕೊಳ್ಳುವ ನಿದರ್ಶನವನ್ನು ಕಾಣುತ್ತೇವೆ. ನಿಶ್ಚಯವಾಗಿ ಹೇಳಿರಲಾರೆನು, ಮೇಜಿನ ಮುಂದೆ ಕೂತುಕೊಳ್ಳುವ ನಿದರ್ಶನದಲ್ಲಿ ಒಬ್ಬ ಸಹೋದರನನ್ನು ಹೊರಗೆ ಹಾಕಿರುವಂತೆ ಕಾಣುತ್ತದೆ, ಪ್ರತ್ಯೇಕವಾಗಿ 11ನೇಯ ವಚನದ ಬೆಳಕಿನಲ್ಲಿ ಆತನೊಂದಿಗೆ ರೊಟ್ಟಿಯನ್ನು ಸಹ ಅವರು ಮುರಿಯಲಿಲ್ಲ.[8]

## ಒಂದೇ ದೇಹದ ಸದಸ್ಯರು (1 ಕೊರಿಂಥ 10:16, 17)

ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ (1 ಕೊರಿಂಥ 10:16, 17).

“ಸಭೆಯೆಂಬ” ಒಂದೇ ದೇಹ ಎಂದು ಪೌಲನು ಬರೆದನು (ರೋಮಾಪು 12:5; 1 ಕೊರಿಂಥ 12:12, 13, 20; ಎಫೆಸ 4:4), ಈ ಸಭೆಯು ಕರ್ತನ ಭೋಜನದಲ್ಲಿರುವ ದೇಹ ಹಾಗೂ ರಕ್ತದಲ್ಲಿ ಪಾಲು ತೆಗೆಯಬಹುದು (ಎಫೆಸ 1:22, 23; ಕೊಲೊಸ್ಸೆ 1:18, 24). ಈ ಪಾಲುದಾರರು ಒಂದೇ ದೇಹವಾಗಿ, ಕರ್ತನ ಸಭೆಯಾಗಿದ್ದಾರೆ. ಈ ಸಭೆಯ ಸದಸ್ಯರು ಆತನ ದೇಹದ ಸದಸ್ಯರು. ಈ ದೇಹದಿಂದ ಹೊರಗೆ ಇರುವವರು ಆತನ ದೇಹ ಹಾಗೂ ರಕ್ತದಲ್ಲಿ ಅನ್ಯೋನ್ಯತೆ ಹೊಂದುವದಿಲ್ಲ.

ಒಂದೇ ದೇಹವೆಂಬುದು ಕರ್ತನ ದೇಹಕ್ಕೆ ಸೇರಿರುತ್ತದೆ (ರೋಮಾಪುರ 12:5), ದೀಕ್ಷಾಸ್ನಾನದ ಮೂಲಕ ಅದಕ್ಕೆ ಸೇರುತ್ತಾರೆ (ರೋಮಾಪುರ 6:3; ಗಲಾತ್ಯ 3:26, 27). ನಂಬಿಕೆಯ ಮೂಲಕ ದೀಕ್ಷಾಸ್ನಾನ ಹೊಂದಿದವರು ಕರ್ತನ ಭೋಜನವನ್ನು ತೆಗೆದುಕೊಳ್ಳಬಹುದು.

ನೀತಿಗೆ ಒಬ್ಬನು ಹೃದಯಪೂರ್ವಕವಾಗಿ ಸೇವಕನಾಗಿರುವನೆಂದು, ಯಾರು ಸಹ ಅರಿಯಲು ಅಸಾಧ್ಯ (ರೋಮಾಪುರ 6:17, 18). ದೇವರು ಮಾತ್ರ ಮನುಷ್ಯನ ಹೃದಯವನ್ನು ಅರಿತಿರುವದರಿಂದ, ಪ್ರತಿಯೊಬ್ಬನು ತನ್ನನ್ನು ತಾನೇ ಪರೀಕ್ಷಿಸಿಕೊಂಡವನಾಗಿ ಕರ್ತನ ಭೋಜನದಲ್ಲಿ ಪಾಲುಗಾರನಾಗಬೇಕು. ಒಬ್ಬನು ಪಾಲುಗಾರನಾಗುವ ಹಕ್ಕನ್ನು ಹೊಂದಿರುವದಿಲ್ಲವಾದರೆ, ಮತ್ತೊಬ್ಬನು ಅವನಿಗೆ ಹಕ್ಕು ಇರುವದಿಲ್ಲ ಎಂದು ಹೇಳಲು ಅಧಿಕಾರವನ್ನು ಹೊಂದಿರುವದಿಲ್ಲ. ಪ್ರತಿಯೊಬ್ಬನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಈ ನೆನಪಿನ ಭೋಜನದಲ್ಲಿ ಪಾಲುಗಾರನಾಗ ಬೇಕು (1 ಕೊರಿಂಥ 11:28).

ಸಭೆಯು ಯಾರನ್ನು ಅನೈತಿಕ ಎಂದು ಪರಿಗಣಿಸಿದೆಯೋ, ಅಂಥವನೊಂದಿಗೆ ಕ್ರೈಸ್ತರು ಭೋಜನ ಮಾಡಬಾರದು (1 ಕೊರಿಂಥ 5:7, 11).

ಕರ್ತನ ಮೇಜಿನ ಸುತ್ತಲು ಸೇರಿ ಬಂದು ಅದನ್ನು ಕ್ರಮವಾಗಿ ನಡೆಸುವವನು ಕ್ರಿಸ್ತನ ಒಂದೇ ದೇಹದಲ್ಲಿರುವ ಸದಸ್ಯರು ಮಾತ್ರ ಕರ್ತನ ಭೋಜನದಲ್ಲಿ ಪಾಲುಗಾರರು ಎಂದು ನಿರ್ಣಯಿಸಬಹುದು (1 ಕೊರಿಂಥ 10:16, 17) ಯಾಕಂದರೆ ಅವರು ಕ್ರಿಸ್ತನ ದೇಹಕ್ಕೆ ದೀಕ್ಷಾಸ್ನಾನ ಹೊಂದಿದ್ದಾರೆ (1 ಕೊರಿಂಥ 12:13).

## ಸಾರಾಂಶ

ಕೆಲವು ಸಭೆಯವರು ಗೋಡೆಗಳ ನಡುವೆ ಜರುಗುವ ಕರ್ತನ ಭೋಜನಕ್ಕೆ ಆಧ್ಯತೆ ನೀಡುತ್ತಾರೆ. ತಮ್ಮ ಸಭೆಗೆ ಸೇರಿದ ಸಭಾ ಸದಸ್ಯರೊಂದಿಗೆ ಮಾತ್ರ ಮಾಡುತ್ತಾರೆ. ಕೆಲವರು ಕರ್ತನ ಭೋಜನವನ್ನು ಸ್ಥಳಿಯ ಸಭೆಯವರಿಗೆ ಮಾತ್ರ ಮೀಸಲಿಡುತ್ತಾರೆ.

ಇನ್ನು ಕೆಲವರು “ಸರ್ವರಿಗೂ ಕರ್ತನ ಭೋಜನವನ್ನು” ನೀಡುತ್ತಾರೆ. ಇಂಥಹ ಸಂದರ್ಭದಲ್ಲಿ ಪಾಲುಗಾರನಾಗುವವನು, ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳಬೇಕು. ನಂಬಿದವರು ತಮ್ಮ ಸದಸ್ಯರಿಗೆ ಮಾತ್ರ ಕರ್ತನ ಭೋಜನದ ಅವಕಾಶವಿದೆ ಎಂದು ಇತರರಿಗೆ ವಿವರಿಸಬೇಕು. ಮಕ್ಕಳು ಮತ್ತು ದೀಕ್ಷಾಸ್ನಾನ ಹೊಂದದವರು ಪಾಲುತೆಗೆದುಕೊಳ್ಳಬಾರದು.

ಕರ್ತನ ಸಭೆಯ ಹಾಗೂ ಕ್ರಿಸ್ತನ ದೇಹದ ಸದಸ್ಯರು ಮಾತ್ರ ಕರ್ತನ ಭೋಜನದಲ್ಲಿ ಪಾಲುಗಾರರಾಗುವ ಹಕ್ಕನ್ನು ಹೊಂದಿದ್ದಾರೆ. ಅವರು ತಮ್ಮ ಪಾಪಕ್ಷಮೆಗಾಗಿ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ್ದಾರೆ. ದೀಕ್ಷಾಸ್ನಾನ ಹೊಂದದ ಜನರು ಕರ್ತನ ಭೋಜನದ ಹಕ್ಕನ್ನು ಹೊಂದಿರುವದಿಲ್ಲ. ಅಂಥವರು ಪಾಲುಗಾರರಾಗದಂತೆ ಎಚ್ಚರವಹಿಸಿ, ಕರ್ತನ ಭೋಜನದ ಹಕ್ಕನ್ನು ಪಡೆಯುವ ಸಲಹೆ ಸೂಚನೆಗಳನ್ನು ನೀಡಬೇಕು. ತಿನ್ನುವವರ ಹಕ್ಕನ್ನು ಪಡೆಯುವ ಸಲಹೆ ಸೂಚನೆಗಳನ್ನು ನೀಡಬೇಕು. ತಿನ್ನುವವರ ಹಕ್ಕನ್ನು ಕಸಿದುಕೊಳ್ಳುವ ಅಧಿಕಾರವು ಯಾರಿಗೂ ಇರುವದಿಲ್ಲ, ಆದರೆ ಸಭೆಯಿಂದ ಹೊರ ಹಾಕಲ್ಪಟ್ಟವರೊಂದಿಗೆ ಪಾಲುಗಾರರಾಗಬಾರದು.

ಟಿಪ್ಪಣಿಗಳು

[1]*Didache* 9.5. [2]Ibid., 14.1-3. [3]Tertullian *On Prescription Against Heretics* 41. [4]*Reasoning from the Scriptures* (Brooklyn, N.Y.: Watchtower Bible Tract and Tract Society of New York, 1989), 267-68. [5]Ronald Stewart Wallace, "Lord's Supper," *The International Standard Bible Encyclopedia,* ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:168. [6]Werner Elert, *Eucharist and Church Fellowship in the First Four Centuries,* trans. N. E. Nagel (St. Louis: Concordia Publishing House, 1966), 84. [7]Ibid., 126. [8]Gordon D. Fee, *The First Epistle to the Corinthians,* The New International Commentary on the New Testament (Grand Rapids, Mich.: Wm. B. Eerdmans Publishing Co., 1987), 218.

## "ಯಜ್ಞವೇದಿಯಲ್ಲಿ ತಿನ್ನುವದಕ್ಕೆ ಹಕ್ಕಿರುವದಿಲ್ಲ" ಇಬ್ರಿಯ 13:10

ಇಬ್ರಿಯ 13:10ರಲ್ಲಿ ನಮಗೊಂದು ಯಜ್ಞವೇದಿಯುಂಟು, ಗುಡಾರದಲ್ಲಿ ಸೇವೆ ಮಾಡುವವರಿಗೆ ಈ ವೇದಿಯಲ್ಲಿರುವ ಪದಾರ್ಥಗಳನ್ನು ತಿನ್ನುವ ಅಧಿಕಾರವಿಲ್ಲ ವೇದಿ ಎಂಬುದು ಯೇಸುವಿಗೆ ಪ್ರತೀಕವೇ? ಅಥವಾ ಆತನ ಯಜ್ಞ ಅಥವಾ ಕರ್ತನ ಭೋಜನಕ್ಕೆ ಪ್ರತೀಕವೇ?

ಇಬ್ರಿಯ 13:10 ಕರ್ತನ ಭೋಜನಕ್ಕೆ ಸಂಬಂಧ ಇರುವದರಿಂದ, ಅದು ಕ್ರಿಸ್ತನ ಯಜ್ಞದ ಶಿಲುಬೆ ಅಥವಾ ಆ ವೇದಿಯ ಮೂಲಕ ನಾವು ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸುತ್ತೇವೆ ಎಂದು ಕೆಲವು ಪಂಡಿತರ ಅಭಿಪ್ರಾಯವಾಗಿದೆ.[1]

ಮೋಶೆಯ ನಿಯಮದ ಪ್ರಕಾರ, ಯಾಜಕ ಅಥವಾ ಅವನ ಸಂಬಂಧಿಕರು ಅಥವಾ ದಾಸರು ವೇದಿಯ ಪದಾರ್ಥಗಳನ್ನು ತಿನ್ನುವ ಹಕ್ಕನ್ನು ಹೊಂದಿದ್ದರು (ಯಾಜಕಕಾಂಡ 7:29-36; 22:10-16). ಇತರರ್ಯಾರು ಅದನ್ನು ತಿನ್ನಬಾರದಿತ್ತು (ಅರ್ಹತೆ ಹೊಂದಿರಲಿಲ್ಲ) ಕ್ರೈಸ್ತರು ತಿನ್ನುವದನ್ನು ಯೆಹೂದ್ಯ ಯಾಜಕರು ತಿನ್ನಬಾರದಿತ್ತು. ಕ್ರೈಸ್ತರು ಅಂದರೆ ಹೊಸ ಒಡಂಬಡಿಕೆಯ ಯಾಜಕರು (1 ಪೇತ್ರ 2:9) - ಕ್ರಿಸ್ತನ ಯಜ್ಞದಲ್ಲಿ ಪಾಲುದಾರರು, ಕ್ರಿಸ್ತನು ರಕ್ತದಿಂದ ಕೊಂಡುಕೊಂಡ ಲಾಭವನ್ನು ಪಡೆಯಲು ಅರ್ಹರು. ದೀಕ್ಷಾಸ್ನಾನದಿಂದ ಕ್ರಿಸ್ತನನ್ನು ಧರಿಸಿಕೊಂಡವರು, ಕ್ರಿಸ್ತನ ಹಾಗೂ ಆತನ ಆಶೀರ್ವಾದಕ್ಕೆ ಅರ್ಹರು (ಎಫೆಸ 3:6; ಇಬ್ರಿಯ 3:14). ಕ್ರಿಸ್ತನನ್ನು ತಿರಸ್ಕರಿಸುವವರು, ರಕ್ಷಣೆಯ ಹಾಗೂ ಕರ್ತನ ಭೋಜನವನ್ನು ತಿರಸ್ಕರಿಸಿದ್ದಾರೆ.

ಕ್ರಿಸ್ತನ ಶಿಲುಬೆಯ ಮೂಲಕ ಬರುವವರು ಅರ್ಹರು. ಬಾಯಾರಿದವನು ಜೀವ ಬುಗ್ಗೆಯ ಬಳಿ ಬರಲು ಅರ್ಹನು (ಪ್ರಕಟನೆ 21:6; 22:17). ನಂಬಿಕೆಯಿಂದ, ಮಾನಸಾಂತರದಿಂದ, ಹಾಗೂ ವಿಧೇಯತೆಯಿಂದ ಬರುವವರು ರಕ್ಷಣೆಯ ಆಶೀರ್ವಾದಕ್ಕೆ ಅರ್ಹರು. ಯೇಸುವಿನ ವಾಗ್ದಾನದಂತೆ, "ತಂದೆಯು ನನಗೆ ಕೊಡುವಂಥವರೆಲ್ಲರು ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿಬಿಡುವದೇ ಇಲ್ಲ" (ಯೋಹಾನ 6:37).

ಟಿಪ್ಪಣಿ

[1]Paul Ellingworth and Eugene Albert Nida, *A Translator's Handbook on the Letter to the Hebrews* (New York: United Bible Societies, 1983), 327. F. F. Bruce, ರವರು ಈ ವಚನದಲ್ಲಿ [ಕರ್ತನ ಭೋಜನ]ಕ್ಕೆ ಯಾವುದನ್ನು ಸಂಪರ್ಕಿಸಲಾಗಿದೆ? ಎಂದು ಕೇಳಿದರು. ಮತ್ತು ಅವರು ಹೀಗೆ ಉತ್ತರಿಸಿದರು: "ಯಾವುದೇ ನೇರವಾದ ಸಂಪರ್ಕವಿಲ್ಲವೆಂದು" (F. F. Bruce, *The Epistle to the Hebrews* [Grand Rapids, Mich.: Wm. B. Eerdmans Publishing Co., 1964], 401).